**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯದಲ್ಲಿ, ತರೀಕೆರೆ.**

**ಸಿ.ಸಿ. 267/2020**

ಪಿರ್ಯಾದುದಾರರು ಃ ಸರ್ಕಾರದ ಪರವಾಗಿ ತರೀಕೆರೆ ಪೊಲೀಸರಿಂದ

-ವಿರುದ್ಧ-

ಆರೋಪಿ/ತರು ಃ ಗಣೇಶ ಎಲ್ ಯಾನೆ ಚಿನ್ನು ಮತ್ತು ಇನ್ನೊಬ್ಬರು

-ಃದೋಷಾರೋಪಣೆಃ-

ಶ್ರೀ ನಂಜೇಗೌಡ ಎಂ.ಸಿ., ಬಿ.ಎ.ಎಲ್., ಎಲ್.ಎಲ್.ಎಂ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ತರೀಕೆರೆ ಆದ ನಾನು ಈ ಕೆಳಗೆ ಕಾಣಿಸಿರುವಃ

1. ಗಣೇಶ ಎಲ್ ಯಾನೆ ಚಿನ್ನು ಬಿನ್ ಲಕ್ಷ್ಮಣ, 18 ವರ್ಷ, ಡ್ರೈವರ್, ವಾಸಃಹುತ್ತಾಕಾಲೋನಿ, ಕವಲುಗುಂದಿ, ದಡಂಘಟ್ಟೆ ರಸ್ತೆ, ಭದ್ರಾವತಿ ಟೌನ್. ಶಿವಮೊಗ್ಗ ಜಿಲ್ಲೆ.

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಎಂದರೆಃ

ದಿನಾಂಕ 14.01.2020 ರಂದು ರಾತ್ರಿ 8-45 ರ ಸಮಯದಲ್ಲಿ ತರೀಕೆರೆ ಪೊಲೀಸ್ ಠಾಣಾ ಸರಹದ್ದಿಗೆ ಬರುವ ತರೀಕೆರೆ ಪಟ್ಟಣದ ಎ ಪಿ ಎಂ ಸಿ ಎದುರು ಎನ್ ಹೆಚ್ 206 ರಸ್ತೆಯ ಬದಿಯಲ್ಲಿ ಚಾಸಾ-1 ರವರು ರಾಜ್ ನರ್ಸಿಂಗ್ ಹೋಂ ನಲ್ಲಿ ಕೆಲಸ ಮುಗಿಸಿ ಮನೆಗೆ ಹೋಗಲು ನಡೆದುಕೊಂಡು ಕೈಯಲ್ಲಿ ವಿವೋ ಮೊಬೈಲ್ ನ್ನು ಹಿಡಿದುಕೊಂಡು ಹೋಗುತ್ತಿರುವಾಗ ಆರೋಪಿತರಾದ ನೀವು ಗ್ರೇ ಬಣ್ಣದ ನಂಬರ್ ಇಲ್ಲದ ಡಿಯೋ ಸ್ಕೂಟಿಯನ್ನು 2 ನೇ ಆರೋಪಿಯಾದ ನೀವು ಕೋಡಿಕ್ಯಾಂಪ್ ಕಡೆಯಿಂದ ಚಾಲನೆ ಮಾಡಿಕೊಂಡು ಬಂದು ಚಾಸಾ-1 ರವರ ಕೈಯಲ್ಲಿದ್ದ ಸುಮಾರು 7000/- ರೂ. ಬೆಲೆಯ ವಿವೋ ಮೊಬೈಲನ್ನು ಸ್ಕೂಟಿಯ ಹಿಂಬದಿ ಕುಳಿತಿದ್ದ 1 ನೇ ಆರೋಪಿಯಾದ ನೀವು ಕಿತ್ತುಕೊಳ್ಳಲು ಪ್ರಯತ್ನಪಟ್ಟಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ **393** ರೀತ್ಯಾ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ

Sd/-

**(ನಂಜೇಗೌಡ ಎಂ.ಸಿ.)**

ಹಿ. ಪ್ರಧಾನ ಪ್ರದನ್ಯಾದಂ, ತರೀಕೆರೆ.

ಪ್ರಃ 1) ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉಃ ಹೌದು

ಪ್ರಃ 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ?

ಉಃ ಸುಳ್ಳು, ವಿಚಾರಣೆಯಾಗಬೇಕು

(ಆರೋಪವನ್ನು ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ನಾನೇ ಸ್ವತಃ ಬರೆದುಕೊಂಡಿರುವುದು ನಿಜ ಮತ್ತು ಸತ್ಯವಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ)

ದಿನಾಂಕಃ05.12.2022

*Sd/-*

ಹಿ. ಪ್ರಧಾನ ಪ್ರ.ದ.ನ್ಯಾ.ದಂ ತರೀಕೆರೆ.

ಆರೋಪಿ/ತರ ಸಹಿಃ